ಕ್ರ. ಸಂ.	ಗಿರಣಿಯ ಹೆಸರು	1999-2000 ಅಂತ್ಯಕ್ಕೆ ಲಾಭ:ನಷ್ಟ (ತಾತ್ಕಾಲಿಕ) ರೂ. ಲಕ್ಷಗಳಲ್ಲಿ
10.	ರೈತರ ಸಹಕಾರಿ ನೂಲಿನ ಗಿರಣಿ, ರಾಣೆಬೆನ್ನೂರು	3603.95 ನಷ್ಟ
11.	ಬಿಜಾಪುರ ಸಹಕಾರಿ ನೂಲಿನ ಗಿರಣಿ, ಬಿಜಾಪುರ	ಸಮಾಪನೆಯಲ್ಲಿದೆ
12.	ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ, ಬಾಗಲಕೋಟೆ	ಸಮಾಪನೆಯಲ್ಲಿದೆ.

ಗೃಹ ಮಂಡಳಿಯಲ್ಲಿ ಬಿಡಿ ನಿವೇಶನ ಮಂಜೂರಾತಿ

3018 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕರ್ನಾಟಕ ಗೃಹ ಮಂಡಳಿಯಲ್ಲಿ ಬಿಡಿ ನಿವೇಶನ ಮಂಜೂರು ಮಾಡಲಾದ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)*

ಆ) *ಬಿಡಿ ನಿವೇಶನ ಹಂಚಿಕೆ ಮಾಡಲು ಮಾನದಂಡಗಳೇನು?*

ಇ) *ಕಾನೂನುಬಾಹಿರವಾಗಿ ಈಗಲೂ ಬಿಡಿ ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ ಮಂಜೂರು ಮಾಡುತ್ತಿರುವುದು ನಿಜವೇ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) 335

ಆ) ಲಭ್ಯವಿರುವ ಬಿಡಿ ನಿವೇಶನಗಳನ್ನು ಕರ್ನಾಟಕ ಗೃಹ ಮಂಡಳಿ (ಹಂಚಿಕೆ) ನಿಯಮಾವಳಿ 4(ಎ) ಪ್ರಕಾರ ಹಂಚಲಾಗುತ್ತಿದೆ.

ಇ) ನಿಜವಲ್ಲ.

ಬೆಂಗಳೂರು ನಗರದಲ್ಲಿರುವ ಸರ್ಕಾರಿ ಜಮೀನುಗಳು

3021 - ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಜಮೀನಿನ ವಿಸ್ತೀರ್ಣ ಎಷ್ಟು? ತಾಲ್ಲೂಕುವಾರು ವಿವರ ನೀಡಿ?*

ಆ) *ಈ ಪೈಕಿಯಲ್ಲಿ ಇರುವ ಜಮೀನಿನ ವಿಸ್ತೀರ್ಣ ಹಾಗೂ ಒತ್ತುವರಿಯಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಆ) ಆ) ಬೆಂಗಳೂರು ನಗರ ಜಿಲ್ಲೆಯಲ್ಲಿನ ಸರ್ಕಾರಿ ಜಮೀನಿನ ವಿವರ ಕೆಳಕಂಡಂತಿದೆ.

ತಾಲ್ಲೂಕು	ಇರುವ ಜಮೀನಿನ ವಿಸ್ತೀರ್ಣ (ಎಕರೆಯಲ್ಲಿ)	ಒತ್ತುವರಿಯಾಗಿರುವ ವಿಸ್ತೀರ್ಣ (ಎಕರೆಯಲ್ಲಿ)
ಬೆಂಗಳೂರು ಉತ್ತರ	11663-23	7751-20
ಬೆಂಗಳೂರು ಉತ್ತರ (ಅಪರ)	17273-21	8535-04
ಬೆಂಗಳೂರು ದಕ್ಷಿಣ	18597-00	5536-00
ಬೆಂಗಳೂರು ದಕ್ಷಿಣ (ಅಪರ)	12768-00	5685-33
ಆನೇಕಲ್	18594-00	13976-00
	76896-04	**41274-17**

ಚಾಮರಾಜಗರದಲ್ಲಿ ಕಂದಾಯ ಕಛೇರಿ ತೆರೆಯುವ ಬಗ್ಗೆ

3022 - ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಕಂದಾಯ ಉಪವಿಭಾಗಾಧಿಕಾರಿಗಳ ಕಛೇರಿ ತೆರೆಯಲು ಸಾರ್ವಜನಿಕರಿಂದ, ಜನ ಪ್ರತಿನಿಧಿಗಳಿಂದ ಒತ್ತಡ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಉಪ ವಿಭಾಗಾಧಿಕಾರಿಯವರ ಕಛೇರಿ ಮಂಜೂರು ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು ಬಂದಿದೆ.

ಆ) ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಉಪವಿಭಾಗಾಧಿಕಾರಿಗಳ ಕಛೇರಿ ತೆರೆಯುವ ಸಂಬಂಧ ಪ್ರಸ್ತಾವನೆ ಕಳುಹಿಸುವಂತೆ ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಸದರಿಯವರಿಂದ ಪ್ರಸ್ತಾವನೆ ಬಂದ ನಂತರ ನಿಯಮಾನುಸಾರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.